<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ನ ರಾ ಪುರ.</u>

**ಸಿ ಸಿ ನಂ. 378/2020**

ಸಾಕ್ಷಿದಾರರ ಹೆಸರು - ದಿಲೀಪ್ ಕುಮಾರ್

**ಚಾ ಸಾ - 16**

ತಂದೆಯ ಹೆಸರು - ತಿಮ್ಮೇಗೌಡ

**ಫ್ರಾ ಸಾ - 10**

ವಯಸ್ಸು - **32 ವರ್ಷ**

ಉದ್ಯೋಗ - ಪಿ ಎಸ್ ಐ

ವಾಸ ಸ್ಥಳ - ಬಾಳೂರು

ದಿನಾಂಕಃ **03.03.2025** ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಅಭಿಯೋಜನೆಯ ಪರಃ ಎ ಪಿ ಪಿ ಯವರಿಂದ:</u>

ನಾನು 2020 ರಿಂದ 2022 ರವರೆಗೆ ಪಿಎಸ್ಐ ಆಗಿ ನ.ರಾ.ಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕಃ 26.04.2020 ರಂದು ನಾನು ಠಾಣೆಯಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಮೊ ಸಂಃ 59/2020 ಕಲಂ 353,448,504,506, 323 ಸಹವರ್ತಿ ಕಲಂ 149 ಐ ಪಿ ಸಿ ರೀತ್ಯಾ ಪ್ರ ವ ವರದಿ ದಾಖಲು ಮಾಡಿಕೊಂಡು ಮೇಲಾಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಈಗಾಗಲೇ ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ ವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-18, ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ-1 ರವರು ತೋರಿಸಿರುವ ಕೃತ್ಯ ಸ್ಥಳದಲ್ಲಿ ಚಾಸಾ-8 ಮತ್ತು 9 ರವರ ಸಮಕ್ಷಮ ಮ 2.00 ರಿಂದ 2.30 ರವರೆಗೆ ಮಹಜರ್ ಮಾಡಿ ಪೋಟೋ ತೆಗೆದಿರುತ್ತೇನೆ.

ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ಪೋಟೋವನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ.

ಅದೇ ದಿನ ಚಾಸಾ-1 ರವರ ಮನೆಯ ಹತ್ತಿರ ಚಾಸಾ-1 ರವರು ತೋರಿಸಿದಂತೆ ಚಾಸಾ-8 ಮತ್ತು 9 ರವರ ಸಮಕ್ಷಮ ಕೃತ್ಯ ನಡೆದ ಸ್ಥಳದ ಮಹಜರ್ ಕ್ರಮವನ್ನು ಮ 2.45 ರಿಂದ 3.15 ರವರೆಗೆ ಮಾಡಿ ಪೋಟೋ ತೆಗೆದಿರುತ್ತೇನೆ.

ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-4, ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಪೋಟೋಗಳನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-5 ಮತ್ತು 6 ಎಂದು ಗುರುತಿಸಲಾಗಿದೆ.

ಅದೇ ದಿನ ಚಾಸಾ-2 ರಿಂದ 7 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಚಾಸಾ-15 ರವರಿಂದ ಸಿ ಡಿ ಮತ್ತು 65 ಬಿ ದೃಢೀಕರಣವನ್ನು ಪಡೆದಿರುತ್ತೇನೆ. ಸಾಕ್ಷಿ ಸಿ ಡಿ ಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-19, 65 ಬಿ ದೃಢೀಕರಣವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-20, ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು.

ದಿನಾಂಕಃ 02.05.2020 ರಂದು ಚಾಸಾ-12 ರವರಿಗೆ ಚಾಸಾ-1 , 2 ಮತ್ತು 3 ರವರ ಕರ್ತವ್ಯ ದೃಢೀಕರಣ ನೀಡಲು ಮನವಿ ಸಲ್ಲಿಸಿರುತ್ತೇನೆ. ಸದರಿಯವರು ನೀಡಿರುವ ಕರ್ತವ್ಯ ದೃಢೀಕರಣವನ್ನು ಸ್ವೀಕರಿಸಿಕೊಂಡಿರುತ್ತೇನೆ. ಸಾಕ್ಷಿಯು ಮನವಿಯನ್ನು ನೋಡಿ ಗುರುತಿಸಿದ್ದು ಅದು ಈಗಾಗಲೆ ನಿಪಿ-11, ಸಾಕ್ಷಿಯ ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಕರ್ತವ್ಯ ದೃಢೀಕರಣವನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-12, ಸಾಕ್ಷಿಯ ಸಹಿಯನ್ನು ನಿಪಿ-12(ಬಿ) ಎಂದು ಗುರುತಿಸಲಾಯಿತು.

ದಿನಾಂಕಃ 03.05.2020 ರಂದು ಚಾಸಾ-11 ರವರಿಗೆ ಕೃತ್ಯ ನಡೆದ ಸ್ಥಳದ ದಾಖಲೆ ಕೋರಿ ಮನವಿ ಸಲ್ಲಿಸಿದ್ದು, ಸದರಿಯವರು ದಿನಾಂಕಃ 26.05.2020 ರಂದು ವರದಿ ಮತ್ತು ದಾಖಲೆ ನೀಡಿದ್ದು, ಸ್ವೀಕರಿಸಿಕೊಂಡಿರುತ್ತೇನೆ. ಸಾಕ್ಷಿ ಮನವಿಯನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-8, ಸಾಕ್ಷಿಯ ಸಹಿಯನ್ನು ನಿಪಿ-8(ಎ)ಎಂದು ಗುರುತಿಸಲಾಯಿತು. ಸಾಕ್ಷಿ ವರದಿ ಮತ್ತು ದಾಖಲೆ ನೋಡಿ ಗುರುತಿಸಿದ್ದು ಅವು ಈಗಾಗಲೇ ನಿಪಿ-9 ಮತ್ತು 10, ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಮತ್ತು 10(ಬಿ) ಎಂದು ಗುರುತಿಸಲಾಯಿತು.

ದಿನಾಂಕಃ 14.05.2020 ರಂದು ಚಾಸಾ-12 ರವರಿಗೆ ಕೃತ್ಯ ನಡೆದ ಸ್ಥಳದ ಜಾಗದ ಬಗ್ಗೆ ದಾಖಲೆ ಕೋರಿ ಮನವಿ ಸಲ್ಲಿಸಿರುತ್ತೇನೆ. ಅದೇ ದಿನ ಸದರಿಯವರು ವರದಿ ಮತ್ತು ದಾಖಲೆ ನೀಡಿದ್ದು ಸ್ವೀಕರಿಸಿಕೊಂಡಿರುತ್ತೇನೆ. ಸಾಕ್ಷಿ ಮನವಿಯನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-13, ಸಾಕ್ಷಿಯ ಸಹಿಯನ್ನು ನಿಪಿ-13(ಎ)ಎಂದು ಗುರುತಿಸಲಾಯಿತು. ಸಾಕ್ಷಿ ವರದಿ ಮತ್ತು ದಾಖಲೆಗಳನ್ನು

ನೋಡಿ ಗುರುತಿಸಿದ್ದು ಅವು ಈಗಾಗಲೇ ನಿಪಿ-14 ರಿಂದ 17, ಸಾಕ್ಷಿಯ ಸಹಿಯನ್ನು ನಿಪಿ-14(ಬಿ) ರಿಂದ 17(ಬಿ) ಎಂದು ಗುರುತಿಸಲಾಯಿತು.

ದಿನಾಂಕಃ 04.07.2020 ರಂದು ಚಾಸಾ-10 ರವರಿಂದ ಗಾಯಾಳುವಿನ ಗಾಯದ ದೃಢೀಕರಣವನ್ನು ಪಡೆದುಕೊಂಡಿರುತ್ತೇನೆ.

ಸಾಕ್ಷಿಯು ಗಾಯದ ದೃಢೀಕರಣವನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-7, ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು.

ದಿನಾಂಕಃ 04.07.2020 ರಂದು ಪ್ರಕರಣದ ಆರೋಪಿತರು ಜಿಲ್ಲಾ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಹಾಜರಾಗಿದ್ದು, 5 ನೇ ಆರೋಪಿಯ ಸ್ವ ಇಚ್ಛಾಚಿ ಹೇಳಿಕೆ ಪಡೆದುಕೊಂಡಿರುತ್ತೇನೆ. ಆರೋಪಿತರನ್ನು ದಸ್ತಗಿರಿ ಕ್ರಮ ಅನುಸರಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ದಿನಾಂಕಃ 26.08.2020 ರಂದು ಚಾಸಾ-13 ರವರಿಗೆ ಲಾಕ್ ಡೌನ್ ಆದೇಶದ ದೃಢೀಕೃತ ನಕಲನ್ನು ನೀಡಲು ಮನವಿ ಸಲ್ಲಿಸಿದ್ದು, ಸದರಿಯವರು ದಿನಾಂಕಃ 18.09.2020 ರಂದು ವರದಿ ಮತ್ತು ದಾಖಲಾತಿ ನೀಡಿದ್ದು ಸ್ವೀಕರಿಸಿಕೊಂಡಿರುತ್ತೇನೆ.

ಸಾಕ್ಷಿ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-21, ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಸಾಕ್ಷಿ ವರದಿ ಮತ್ತು ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-22, ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು, ದಾಖಲೆಯನ್ನು ನಿಪಿ-23 ಎಂದು ಗುರುತಿಸಲಾಯಿತು.

ದಿನಾಂಕಃ 08.09.2020 ರಂದು ಚಾಸಾ-14 ರವರಿಗೆ ಕೃತ್ಯ ನಡೆದ ಸಮಯದಲ್ಲಿ ವಿದ್ಯುತ್ ಪ್ರಸರಣದ ಬಗ್ಗೆ ದಾಖಲೆ ಕೋರಿ ಮನವಿ ಸಲ್ಲಿಸಿದ್ದು, ಸದರಿಯವರು ದಿನಾಂಕಃ 11.09.2020 ರಂದು ವರದಿ ನೀಡಿದ್ದು ಸ್ವೀಕರಿಸಿಕೊಂಡಿರುತ್ತೇನೆ.

ಸಾಕ್ಷಿ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-24, ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-25, ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 5 ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-26, ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು. ಕೃತ್ಯಕ್ಕೆ ಬಳಸಿರುವ ವಾಹನ ಕೆಎ-18-ಟಿಬಿ-2340 ವಾಹನದ ಬಿ ಎಕ್ಸ್ ಟ್ರ್ಯಾಕ್ಟನ್ನು ಪಡೆದಿರುತ್ತೇನೆ. ಸಾಕ್ಷಿ ಸದರಿ ಬಿ ಎಕ್ಸ್ ಟ್ರ್ಯಾಕ್ಟನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-27, ಸಾಕ್ಷಿಯ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು.

ತನಿಖೆಯಿಂದ ಆರೋಪಿತರ ವಿರುದ್ಧ ಆರೋಪ ಸಾಬೀತಾಗಿದ್ದು, ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ **1** ರಿಂದ **4** ನೇ ಆರೋಪಿತರ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದಃ</u>

ಇಂಟಿಮೇಷನ್ ನಮಗೆ ಆಸ್ಪತ್ರೆಯಿಂದ ಬಂದಿರುತ್ತದೆ. ಸದರಿ ಇಂಟಿಮೇಷನ್ ಕಡತದಲ್ಲಿ ಇರುವುದಿಲ್ಲ ಎಂದರೆ ಸರಿ. ನಾನು ಆಸ್ಪತ್ರೆಗೆ ಹೋಗಿ ಗಾಯಾಳುವಿನ ಹೇಳಿಕೆ ದಾಖಲು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ನನಗೆ ಇಂಟಿಮೇಷನ್ ಬಾರದೇ ಇರುವುದರಿಂದ ನಾನು ಆಸ್ಪತ್ರೆಗೆ ಹೋಗಿ ಗಾಯಾಳುವಿನ ಹೇಳಿಕೆ ದಾಖಲು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ರೋಗಿ ಆಸ್ಪತ್ರೆಯಲ್ಲಿ ತೋರಿಸಿಕೊಂಡು ಹೋದಲ್ಲಿ ನಾವು ಹೇಳಿಕೆ ಪಡೆದುಕೊಂಡಿರುವುದಿಲ್ಲ ಒಳರೋಗಿಯಾಗಿ ದಾಖಲಾದರೆ ನಾವು ಹೇಳಿಕೆ ಪಡೆದುಕೊಳ್ಳುವ ಸಾಧ್ಯತೆ ಇರುತ್ತದೆ ಎಂದು ನುಡಿಯುತ್ತಾರೆ.

ಹೇಳಲಾದ ಕೃತ್ಯ ಸ್ಥಳ ಸುಗ್ಗಪ್ಪನ ಮಠ ತುಂಬಾ ಜನಸಂದಣಿ ಇರುವ ಸ್ಥಳವಾಗಿರುತ್ತದೆ ಎಂದರೆ ಸರಿ. ಮಹಜರಿನಲ್ಲಿ ತೋರಿಸಿರುವ ಸಾರಮ್ಮ, ಪರಮೇಶ್ವರಪ್ಪ ರವರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ಆರೋಪಿತರು ಮರ ಕಡಿದಿರುತ್ತಾರೆಂದು ತೋರಿಸಲು ಯಾವುದೇ ಪೋಟೋವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.ವಾಹನವನ್ನು ಸ್ಥಳಕ್ಕೆ ತೆಗೆದುಕೊಂಡು ಹೋಗಿರುತ್ತಾರೆಂದು ತೋರಿಸಲು ನೆಲದ ಮೇಲ ಟೈರ್ ನ ಗುರುತು ಇರುವ ಬಗ್ಗೆ ಪೋಟೋ ತೆಗೆದಿರುವುದಿಲ್ಲ ಎಂದರೆ ಸರಿ. ನನ್ನ ತನಿಖೆ ಕಾಲದಲ್ಲಿ ಆರೋಪಿತರಿಂದ ಮರ ಕಡಿಯುವ ಸಾಧನಗಳನ್ನು ಜಪ್ತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಹೇಳಲಾದ ಘಟನಾ ಸ್ಥಳದಲ್ಲಿ ಮರದ ಕಂಬಗಳನ್ನು ನೆಟ್ಟು ತಂತಿ ಬೇಲಿ ಹಾಕಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ವಾಹನ ಹೋಗಬಹುದು ಎಂದು ನುಡಿಯುತ್ತಾರೆ. ನನ್ನ ತನಿಖಾ ಕಾಲದಲ್ಲಿ ಟ್ರ್ಯಾಕ್ಟರ್ ಅನ್ನು ಜಪ್ತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಯಾವುದೇ ಮರಗಳನ್ನು ಲೋಡ್ ಮಾಡಿಲ್ಲದ ಕಾರಣ ಟ್ರ್ಯಾಕ್ಟರ್ ಜಪ್ತು ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-13 ನ್ನು ನಾನು ನ ರಾ ಪುರ ಡಿಪೋ ರಸ್ತೆಯಲ್ಲಿರುವ ಕಚೇರಿಗೆ ನೀಡಿರುತ್ತೇನೆ. ನಿಪಿ-14 ರಿಂದ 17 ಅನ್ನು ಅರಣ್ಯ ಇಲಾಖೆಯವರೇ ಠಾಣೆಗೆ ಬಂದು ನೀಡಿರುತ್ತಾರೆಂದು ನುಡಿಯುತ್ತಾರೆ. ನ ರಾ ಪುರ ಡಿಪೋ ರಸ್ತೆಯಲ್ಲಿ ಯಾವುದೇ ಕಚೇರಿ ಇರುವುದಿಲ್ಲ ಉಂಬಳೇಬೈಲಿನಲ್ಲಿ ಕಚೇರಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಚಾಸಾ-4 ಚಾಸಾ-1 ರವರ ತಾಯಿ ಎಂದರೆ ಸರಿ. ಚಾಸಾ-2 ಚಾಸಾ-1 ರವರ ತಮ್ಮ ಎಂದರೆ ಸರಿ. ಚಾಸಾ-3 ಚಾಸಾ-6 ರವರ ಮಗ ಎಂದರೆ ಸರಿ. ಆರೋಪಿತರನ್ನು ಕೆಲಸಕ್ಕಾಗಿ ಚಾಸಾ-4 ರವರು ಚಾಸಾ-1 ರವರ ಪರವಾಗಿ ನೇಮಕ ಮಾಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರು ದಿನನಿತ್ಯ ಕುಡಿದು ವಾಹನ ಚಲಾಯಿಸುತ್ತಿದ್ದು, ನಮ್ಮ ಠಾಣೆಯಲ್ಲಿ ಆತನ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರ ಮದ್ಯಪಾನ ಮಾಡಿ ಸುಗ್ಗಪ್ಪನ ಮಠದಲ್ಲಿ ಅಶಾಂತಿ ಉಂಟು

ಮಾಡಿರುತ್ತಾರೆಂದರೆ ನನಗೆ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿರುವುದಿಲ್ಲ, ಯಾವುದೇ ಮಹಜರ್ ಮಾಡಿ ಫೋಟೋ ತೆಗೆದಿರುವುದಿಲ್ಲ, ಯಾವುದೇ ದಾಖಲೆಗಳನ್ನು ಮತ್ತು ವರದಿ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸ್ವ ಇಚ್ಛಾ ಹೇಳಿಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಫಿರ್ಯಾದು ದಾಖಲು ಮಾಡಿ ಆರೋಪಿತರ ಯಾವುದೇ ತಪ್ಪು ಕಂಡು ಬಂದಿಲ್ಲದಿದ್ದರೂ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ತನಿಖೆ ಮಾಡಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಎನ್ ವಿ ಎಸ್ ವಕೀಲರಿಂದಃ

1 ರಿಂದ 4 ನೇ ಆರೋಪಿತರ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನೆ ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ನ ರಾ ಪುರ.